### ತಾಲೂಕಿನ ಬೈಯಪ್ಪನಹಳ್ಳಿಯಲ್ಲಿ ಕೃಷಿ ಬೆಲೆ ಆಯೋಗದದಿಂದ ರೈತರಿಗೆ ಆರೋಗ್ಯ ತಪಾಸಣಾ ಶಿಬಿರ

# ಸಾಮಾಜಿಕ ಸಾಧನೆಗೆ ಆರೋಗ್ಯ ಅತಿಮುಖ್ಯ: ಪ್ರಕಾಶ್

■ **ವಿಕ ಸುದ್ದಿಲೋಕ** ಕೋಲಾರ

ಮನುಷ್ಯ ಯಾವುದೇ ಸಾಧನೆ ಮಾಡಬೇಕಾದರೆ ಆರೋಗ್ಯ ಅತ್ಯಂತ ಮುಖ್ಯವಾಗಿ ಇರಬೇಕು ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ ಅಭಿಪ್ರಾಯಪಟ್ಟರು.

ತಾಲೂಕಿನ ಬೈಯಪ್ಪನಹಳ್ಳಿ ಗ್ರಾಮದಲ್ಲಿ ಕೃಷಿ ಬೆಲೆ ಆಯೋಗದಿಂದ ಆದಾಯ ಮತ್ತು ಕಲ್ಯಾಣ ಅಭಿವೃದ್ಧಿ ಯೋಜನೆಯಡಿ ಸೋಮವಾರ ರೈತರಿಗಾಗಿ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ರೈತರು ಸ್ವಾಭಿಮಾನಿಗಳು. ಬದುಕು ರೂಪಿಸಿಕೊಳ್ಳಲು ಅವರು ಬೇರೆಯವರ ಮೇಲೆ ಅವಲಂಭನೆಯಾಗುವವರಲ್ಲ, ನೆಮ್ಮದಿಯಿಂದ ಜೀವನ ನಡೆಸಲು ಸ್ವಂತ ಶ್ರಮದಿಂದ ಹಣ ಗಳಿಕೆ ಮಾಡುವವರು. ಮನುಷ್ಯ ಆರೋಗ್ಯವಂತನಲ್ಲದಿದ್ದಾಗ ಎಷ್ಟು ಹಣ ಕೊಟ್ಟರು ಪ್ರಯೋಜನೆಯಾಗುವುದಿಲ್ಲ ಎಂದು ಹೇಳಿದರು.

ಪಟ್ಟಣ, ನಗರ ಪ್ರದೇಶದಲ್ಲಿ ಐಷರಾಮಿ ಜೀವನ ನಡೆಸುವವರಿಗೆ ನೆಮ್ಮದಿಯಿರುವುದಿಲ್ಲ, ಅವರು ತಮ್ಮ ಆಹಾರಕ್ಕೆ ನೆಚ್ಚುವುದು ರೈತರನ್ನೇ. ರೈತರು ಆಹಾರ ಉತ್ಪಾದನೆ





ಬೈಯಪ್ಪನಹಳ್ಳಿಯಲ್ಲಿ ಸೋಮವಾರ ರೈತರಿಗಾಗಿ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರದಲ್ಲಿ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ ಮಾತನಾಡಿದರು (ಮೊದಲ ಚಿತ್ರ). ಕಾರ್ಯಕ್ರಮದಲ್ಲಿ ಈ ಭಾಗದ ರೈತರು, ಸಾರ್ವಜನಿಕರು ಭಾಗವಹಿಸಿದ್ದರು(ಎರಡನೇ ಚಿತ್ರ).

ಮಾಡುವುದನ್ನು ಸ್ಥಗಿತಗೊಳಿಸಿದರೆ, ಜನರು ಹಸಿವಿನಿಂದ ಪರದಾಡಬೇಕಾಗುತ್ತದೆ ಎಂದರು.

ರೈತರು ಮಾಡುವ ಚಟುವಟಿಕೆಗಳಿಂದಲ್ಲೇ ಆದಾಯ ಮತ್ತು ಕಲ್ಯಾಣ ವೃದ್ಧಿಪಡಿಸಿಬೇಕು ಎಂಬ ಉದ್ದೇಶದಿಂದ ಆಯೋಗದಿಂದ ಯೋಜನೆ ರೂಪಿಸಲಾಗಿದೆ. ನೀವು ಬೆಳೆಯುವ ಬೆಳೆಗಳಿಗೆ ಅಗತ್ಯ ಸಹಕಾರ ನೀಡಲು ಇಲಾಖೆಯ ಅಧಿಕಾರಿಗಳು ಸಹ ಸಿದ್ದರಿದ್ದಾರೆ. ಪ್ರತಿಯೊಬ್ಬರು ಯೋಜನೆ ಪ್ರಯೋಜನೆ ಪಡೆದುಕೊಳ್ಳಲು ಮುಂದಾಗಬೇಕು ಎಂದು ಕರೆ ನೀಡಿದರು.

ಕೋಲಾರ ಎಂದರೆ ಎಲ್ಲರಿಗೂ ನೆನಪಾಗುವುದು ಬರದ ಜಿಲ್ಲೆ ಎಂದು. ರಾಜಸ್ಥಾನಕ್ಕಿಂತ ಹೆಚ್ಚಿನ ಬರ ಇಲ್ಲಿಲ್ಲ ಎಂಬುದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ದುರಾದೃಷ್ಟದಿಂದ ಜಿಲ್ಲೆಯಲ್ಲಿ ಎರಡು ವರ್ಷಗಳಿಂದ ಮಳೆ ಕೈಕೊಟ್ಟಿದೆ. ಇದರಿಂದಾಗಿ ಬೆಳೆಗಳನ್ನು ಬೆಳೆಯಲು ಸಾಧ್ಯವಾಗುತ್ತಿಲ್ಲ. ಬರ ಅವರಿಸಿದೆ ಎಂದು ರೈತರು ಸುಮ್ಮನೆ ಕುಳಿತಿಲ್ಲ, ಸಮಸ್ಯೆಯನ್ನು ಮೆಟ್ಟಿ ನಿಂತು ಕೃಷಿ, ತೋಟಗಾರಿಕೆ ಚಟುವಟಿಕೆಗಳ ಬದಲು ಜಾನುವಾರುಗಳಿಗೆ ಬೇಕಾಗಿರುವ ಹೆಬ್ಬೇವು ಇತರೆ ಮರಗಳನ್ನು ಬೆಳೆಸಲು ಮುಂದಾಗಿ ಎಂದು ಸಲಹೆ ನೀಡಿದರು.

ರೈತರ ಪ್ರಗತಿ ಕುರಿತು ಪರಿಶೀಲನೆ ನಡೆಸಲು ಪ್ರತಿ ತಿಂಗಳ 2ನೇ ಮಂಗಳವಾರ ಕಡ್ಡಾಯವಾಗಿ ಸಭೆ ನಡೆಸಬೇಕು. ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡು ರೈತರಿಗೆ ಸಲಹೆ, ಸೂಚನೆಗಳನ್ನು ನೀಡಬೇಕು ಎಂದು ಸೂಚಿಸಿದರು.

ಕಸ್ತೂರಿಬಾ ವೈದ್ಯಕೀಯ ಮಹಾವಿದ್ಯಾಲಯದ ಮುಖ್ಯಸ್ಥ ಡಾ.ಶಂಕರ್ ಮಾತನಾಡಿ, ರೈತ ದೇಶದ ಬೆನ್ನೆಲುಬು. ದೇಶಕ್ಕೆ ಅಗತ್ಯವಾದಷ್ಟು ಆಹಾರ ಉತ್ಪಾದನೆ ಮಾಡುವ ಶಕ್ತಿ ರೈತರಿಗಿದೆ.ನಿಮ್ಮ ಆರೋಗ್ಯ ಉತ್ತಮವಾಗಿದ್ದರೆ ಉಳಿದವರೆಲ್ಲಾ ಜೀವನ ನಡೆಸಲು ಸಾಧ್ಯ ಎಂದು ಹೇಳಿದರು.

ಆರೋಗ್ಯ ಶಿಬಿದಲ್ಲಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಶಿವಕುಮಾರ್, ಸಾಮಾಜಿಕ ಅರಣ್ಯ ಇಲಾಖೆಯ ಉಪ ಸಂರಕ್ಷಣಾಧಿಕಾರಿ ಶ್ರೀನಿವಾಸರಾವ್, ಕೃಷಿ ವಿಜ್ಞಾನಿ ಡಾ.ರಾಮಸ್ವಾಮಿ, ತಾಪಂ ಸದಸ್ಯೆ ಆಂಜಿನಮ್ಮ, ತೋಟಗಾರಿಕೆ ಮಹಾವಿದ್ಯಾಲಯದ ಮುಖ್ಯಸ್ಥ ತುಳಸಿರಾವ್, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ರಂಗಸ್ವಾಮಿ, ಪಿಡಿಒ ಸುರೇಶ್ ಹಾಜರಿದ್ದರು.

## ಕೀಟನಾಶಕ ಬಳಕೆ ಬಗ್ಗೆ ಎಚ್ಚರಿಕೆ

ರೈತರು ಕೀಟನಾಶಕಗಳ ಬಳಕೆ ಬಗ್ಗೆ ಎಚ್ಚರಿಕೆವಹಿಸಬೇಕು. ಕೀಟನಾಶಕ ಸಿಂಪಡನೆ ಬಳಿಕ ಕೈತೊಳೆದರೆ ವಿಷ ಹೋಗುತ್ತದೆ ಎಂಬುದು ತಪ್ಪುಕಲ್ಪನೆ. ವಿಷ ಚರ್ಮ, ಉಸಿರಾಟದ ಮೂಲಕ ಶರೀರ ಪ್ರವೇಶಿಸುತ್ತದೆ. ಆದ್ದರಿಂದ ಈ ಬಗ್ಗೆ ಹೆಚ್ಚಿನ ಎಚ್ಚರಿಕೆವಹಿಸಬೇಕು ಎಂದು ಕಿವಿ ಮಾತು ಹೇಳಿದರು.